

ಚಡಪಡಿಸುತ್ತಲೇ ದಾರಿ ಸವೆಸತೊಡಗಿದ.

'ಬರಕಿಲ್ವೇನಾ ಮಾರಾಯಾ, ಆಗ್ಲೆ ಹನ್ನೊಂದ್ ಗಂಟೆ ಆಗಕ್ಬಂತು. ನೀನ್ ಈ ಹಸ ವಾಲಾಡಿಸ್ಕಂಡು ಕೆರೆತಕೆ ಹೋಗಿ ಬರಹೊತ್ಗೆ ಎಲ್ಲ ಅವರಸದಮ್ಮನಿಗೆ ಹೋಗಿ ಹಿಂದಕ್ ಬಂದಿರ್ತಾರೆ.. ಇಲ್ಲೇ ಮನೆತಾವ್ಲೆ ಎಲ್ಲಾದ್ರೂ ನೀರ್ ಕುಡ್ಸಿ ಕಟ್ಬಾಕದಲ್ವ..' ಕೆರೆ ಕಡೆ ದಾರಿಯಿಂದ ಅವಸರ ಅವರಸವಾಗಿ ಓಡೋಡಿ ಬರುತ್ತಿದ್ದ ಅಮಾಸೆ ಹೇಳಿದ. ಅಷ್ಟರಲ್ಲಾಗಲೇ ಹೊಂಡದ ಬಳಿ ಬಂದಿದ್ದ ಹೆಡ್ಡಪ್ಪನ ಕಾಲುಗಳು ತಡೆದವು.

'ಅರೆ ಇವತ್ತೊಂದು ದಿನ ಇಲ್ಲೇ ಕುಡಿಸಿದರೆ ಹೆಂಗೆ... ನೀರಾಗ್ಲೇ ತಳ ಮುಟ್ಟಿರ ಈ ಹೊಂಡಕ್ಕೆ ಗಬ್ಬದ ಹಸ ಇಳಿಸಿದ್ರೆ ಹೊನ್ನಮ್ಮ ಏನಂತಾಳೋ.. ಮೊದಲೇ ಈ ಹೊಂಡ ಕಂಡ್ರೆ ಅವಳಿಗೆ ಮೈ ಉರಿ ಬರುತ್ತೆ.. ಎಂದು ಕ್ಷಣ ನಿಂತು ಯೋಚಿಸದವನು 'ಏನಾಗುತ್ತೆ, ಕಳೆದವಾರ ಹೊನ್ನಮ್ಮ ಸಂಘದವರ ಜೊತೆ ಬ್ಯಾಂಕಿಗೆ ಹೋಗಿದ್ದಾಗ ಕಡಸುಗಳನ್ನು ಇಳಿಸಿ ಕುಡಿಸಿದ್ದೆನಲ್ಲ... ಹೆಂಗೋ ಎರಡನೇ ಹಂತದಲ್ಲಿ ಕಾಲು ಮುಳುಗುವಷ್ಟು ನೀರಿದೆ... ಮೆಲ್ಲಕೆ ಇಳಿಸಿ ಕುಡಿಸಿದರಾಯ್ತು..' ಎಂದು ನಿರ್ಧಾರಕ್ಕೆ ಬಂದೇ ಬಿಟ್ಟ.

ಹಿಂದಿನ ವಾರ ಎರಡನೇ ಹಂತದಲ್ಲಿ ಒಂದಡಿ